(73)

# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮತ್ತು ಮಾಜಿ ಸದಸ್ಯರುಗಳು ಉಪಯೋಗಿಸುವ ವಾಹನದ ಬಾಡಿಗೆ ಹಣವನ್ನು ಕಟಾಯಿಸುವ ಬಗ್ಗೆ.

*****

**ಓದಲಾಗಿದೆ:-**

ಕಡತದ ಸಂಖ್ಯೆ:ಕವಿಪ:ಶಾಭ:813:2019, ಕಂಡಿಕೆ ಸಂಖ್ಯೆ: 1 ರಿಂದ 5 ರವರೆಗೆ.

**ಪ್ರಸ್ತಾವನೆ:-**

ಓದಲಾಗಿರುವ ಕಡತದಲ್ಲಿ ದಿನಾಂಕ:10-12-2019ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ ವಸತಿ ಸಮಿತಿಯ ಸಭೆಯಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಮಾಜಿ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವಾಹನವನ್ನು ಉಪಯೋಗಿಸಿದಾಗ ವಾಹನ ಬಾಡಿಗೆ ಹಣವನ್ನು ಆಯಾ ಸದಸ್ಯರುಗಳ ವೇತನದಲ್ಲಿ ಹಾಗೂ ಮಾಜಿ ಸದಸ್ಯರುಗಳ ರೈಲ್ವೆ ಭತ್ಯೆಯಿಂದ ಕಟಾಯಿಸಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಪ್ರಸ್ತಾವನೆಯನ್ನು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ: ಕವಿಪ:ಆ-1: 78 : ಶಾಭವಾಪ್ರವೆಕ:2020**
**ಬೆಂಗಳೂರು, ದಿನಾಂಕ: 04.02.2020.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಮಾಜಿ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವಾಹನವನ್ನು ಉಪಯೋಗಿಸಿದಾಗ ವಾಹನದ ಬಾಡಿಗೆ ಹಣವನ್ನು ಅನುಕ್ರಮವಾಗಿ ಸದಸ್ಯರುಗಳ ವೇತನದಲ್ಲಿ ಹಾಗೂ ಮಾಜಿ ಸದಸ್ಯರುಗಳ ರೈಲ್ವೆ ಭತ್ಯೆಯಿಂದ ಕಟಾಯಿಸಲು ದಿನಾಂಕ:01.02.2020 ರಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

**ಮಾನ್ಯ ಸಭಾಪತಿಯವರ ಆದೇಶಾನುಸಾರ,**

**(ಎನ್. ಜಯಂತಿ)**
ಅಧೀನ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.
4/2/2020

ಗೆ:

ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಮಾಜಿ ಸದಸ್ಯರುಗಳಿಗೆ.

---2

ಪ್ರತಿಗಳು:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು;
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ;
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ;
4. ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಕವಿಪ;
5. ಉಪ ಕಾರ್ಯದರ್ಶಿ/ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ/ಆಡಳಿತ ಶಾಖೆ/ಲೆಕ್ಕಪತ್ರ ಶಾಖೆ-2, ಕವಿಪ;
6. ಉಪ ಕಾರ್ಯದರ್ಶಿ/ಸಹಾಯಕ ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ;
7. ಆಂತರಿಕ ಆರ್ಥಿಕ ಸಲಹೆಗಾರರು/ಆರ್ಥಿಕ ಅಧಿಕಾರಿ, ಆಯವ್ಯಯ ಶಾಖೆ, ಕವಿಪ;
8. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು;
9. ಸಿಸ್ಟಂ ಅನಾಲಿಸ್ಟ್/ಸೀನಿಯರ್ ಪ್ರೋಗ್ರಾಮರ್, ಗಣಕ ಕೇಂದ್ರ, ಕವಿಪ;
10. ಸಚಿವಾಲಯದ ಎಲ್ಲಾ ಅಧಿಕಾರಿಗಳಿಗೆ, ಕವಿಪ;
11. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು.